

ಪತಿ ಅಬೂಬಕ್ಕರ್ ಅವರೊಂದಿಗೆ ಸಾರಾ

ನಮ್ಮಲ್ಲಿರಬೇಕು. ಈ ಜಾಣತನವೂ ಸಾರಾ ಅವರಲ್ಲಿ ಇದ್ದುದ್ದರಿಂದಲೇ ಅವರು ತಮ್ಮ ಭವಿಷ್ಯವನ್ನು ಧೈರ್ಯದಿಂದ ಸ್ವಾಗತಿಸಿದರು. ಮುಂಬರುವ ಅಪಾಯಗಳಿಗೆ ಹೆದರಿ ತನ್ನ ಸುತ್ತಲೂ ಬೇಲಿಗಳನ್ನು ಹಾಕಿಕೊಂಡಿದ್ದರೆ ಅವರ ಸಾಹಿತ್ಯ ಕೃಷಿಯು ಇಷ್ಟೊಂದು ಪ್ರಸಿದ್ಧಿಯನ್ನು ಪಡೆಯುತ್ತಿರಲಿಲ್ಲ. ಹೆಣ್ಣು ಅಮಾಯಕಿ ಅಲ್ಲ, ದುರ್ಬಲಳಲ್ಲ ಎಂಬುದನ್ನು ಸಾಕ್ಷೀಕರಿಸಿದ ಹಲವಾರು ಘಟನೆಗಳು ಅವರ ಜೀವನದಲ್ಲಿ ನಡೆದಿವೆ.

ಮಂಗಳೂರಿನ ಪತ್ರಿಕೆಯೊಂದು ಅವರನ್ನು ನಿಂದಿಸಿ ಲೇಖನ ಪ್ರಕಟಿಸಿದಾಗ ಮಾನನಷ್ಟ ಮೊಕದ್ದಮೆ ಹಾಕಿ ಗೆದ್ದವರು ಸಾರಾ. ತನ್ನ ಅನುಮತಿ ಪಡೆಯದೆ ಕಥೆ, ಕಾದಂಬರಿಯನ್ನು ಅನುವಾದಿಸಿದವರಿಗೆ ಪತ್ರದ ಮೂಲಕ ಚುರುಕು ಮುಟ್ಟಿಸಿದ್ದಾರೆ. ಅವರ ಒಪ್ಪಿಗೆ ಪಡೆಯದೆ ದೂರದರ್ಶನದಲ್ಲಿ ಧಾರಾವಾಹಿ ಪ್ರಸಾರ ಮಾಡಿದವರ ವಿರುದ್ಧ ಕೇಸು ದಾಖಲಿಸಿದ್ದಾರೆ. ಏನಾದರೂ ಮಾಡಿಕೊಳ್ಳಲಿ ಎಂದು ಸುಮ್ಮನಿರುವ ಜಾಯಮಾನ ಸಾರಾ ಅವರದ್ದಲ್ಲ. ಹಾಗೆ ಅವರನ್ನು ಬಿಟ್ಟರೆ ಮುಂದೆ ಯಾರನ್ನಾದರೂ ವಂಚಿಸುವುದು ಅವರಿಗೆ ಅಭ್ಯಾಸವಾಗುತ್ತದೆ. ನಾವು ವಂಚನೆಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂಬುದು ಸಾರಾ ಅವರ ಅಭಿಪ್ರಾಯವಾಗಿತ್ತು. ಈ ಭೂಮಿಯಲ್ಲಿ ಕಲಿಯಲು ಅತ್ಯಂತ ಕಷ್ಟವಾದ ಕಲೆಯೆಂದರೆ ಜೀವನ ಕಲೆ. ಈ ಬದುಕೇ ಒಂದು ಪಾಠಶಾಲೆ. ಇದರಲ್ಲಿ ಕಲಿತು ಮುಗಿಯಲಾರದಷ್ಟು ಪಾಠಗಳಿವೆ. ಸಾರಾ ಅವರು ತಮ್ಮ ಜೀವನದಲ್ಲಿ ತಾವು ಕಲಿತ ಪಾಠಗಳನ್ನು ಮುಂದಿನ ಪೀಳಿಗೆಗಾಗಿ ಬರೆದಿಟ್ಟು ಹೋಗಿದ್ದಾರೆ. ಇದರಿಂದಾಗಿ ಮೆಚ್ಚುವ ಮಿತ್ರರನ್ನು ಗಳಿಸಿದ್ದಷ್ಟೆ, ದ್ವೇಷಿಸುವ ವೈರಿಗಳನ್ನು ಗಳಿಸಿದ್ದರು. ದುರ್ಬಲರ, ಶೋಷಿತರ ಧ್ವನಿಗೆ ತಮ್ಮ ಬಂಡಾಯದ ಧ್ವನಿಯನ್ನು ಸೇರಿಸಿದ್ದರು. ಈಗ ಆ ಧ್ವನಿ ಮೌನವಾಗಿದೆ. ಅವರ ಮಿತ್ರರು, ವೈರಿಗಳು ಆತ್ಮಾವಲೋಕನ ಮಾಡಿಕೊಳ್ಳುವಲ್ಲಿ ನಿರತರಾಗಿದ್ದಾರೆ. ನಮ್ಮ ರಾಜ್ಯ ಮತ್ತು ಬೇರೆ ರಾಜ್ಯಗಳ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ತಮ್ಮ ಬಗಲಿಗೇರಿಸಿಕೊಂಡ ಸಾರಾ ನಮ್ಮ ಇಡೀ ದೇಶದ ನೊಂದ ಮಹಿಳೆಯರ ಧ್ವನಿಯಾಗಿ ಮುಂಚೂಣಿಯಲ್ಲಿದ್ದರು. ಈಗ ಉಳಿದಿರುವ ಅವರ ಗೆಳತಿಯರೆಲ್ಲ ಅವರು ಬಿಟ್ಟು ಹೋದ ಸ್ಥಾನವನ್ನು ತುಂಬಾ ಜವಾಬ್ದಾರಿಯಿಂದ ನಿರ್ವಹಿಸಬೇಕಾದುದೇ ಅವರಿಗೆ ಸಲ್ಲಿಸುವ ನುಡಿ ನಮನವೆಂದು ನಾನು ನಂಬಿದ್ದೇನೆ.

●